# ಭವ್ಯ ಭಾರತದ ಕನಸು

**ಡಾ. ಎ.ಪಿ.ಜೆ. ಅಬ್ದುಲ್ ಕಲಾಂ.**

**ಡಾ. ಅಬ್ದುಲ್ ಕಲಾಂ ಅವರು ಹೈದರಾಬಾದಿನಲ್ಲಿ ನೀಡಿದ ಉಪನ್ಯಾಸದ ಕನ್ನಡರೂಪ**

**ಭಾ**ರತಕ್ಕೆ ಸಂಬಂಧಿಸಿದಂತೆ ಮೂರು ಚಿತ್ರಗಳು ನನ್ನ ಕಣ್ಮುಂದೆ ಇವೆ. ೩೦೦೦ ವರ್ಷಗಳ ನಮ್ಮ ಇತಿಹಾಸದಲ್ಲಿ ಜಗತ್ತಿನ ಎಲ್ಲ ಜನರೂ ನಮ್ಮ ಮೇಲೆ ಧಾಳಿ ಇಟ್ಟರು, ನಮ್ಮ ಭೂಮಿಯನ್ನು ಆಕ್ರಮಿಸಿದರು, ನಮ್ಮ ಮನಸ್ಸನ್ನೂ ಗೆದ್ದರು. ಅಲೆಗ್ಸಾಂಡರ್‌ನಿಂದ ಈ ಧಾಳಿ ಪ್ರಾರಂಭವಾಯಿತು. ಗ್ರೀಕರು, ಟರ್ಕರು, ಮೊಗಲರು, ಪೋರ್ಚುಗೀಸರು, ಬ್ರಿಟಿಷರು, ಫ್ರೆಂಚರು, ಡಚ್ಚರು ಎಲ್ಲರೂ ಬಂದರು, ನಮ್ಮ ಸಂಪತ್ತನ್ನು ದೋಚಿಕೊಂಡು ಹೋದರು, ನಮ್ಮದೆಲ್ಲವನ್ನೂ ಅಪಹರಿಸಿದರು. ಆದರೂ ನಾವು ಮಾತ್ರ ಯಾರಿಗೂ ಹೀಗೆ ಮಾಡಲಿಲ್ಲ. ನಾವು ಯಾವ ದೇಶವನ್ನೂ ಆಕ್ರಮಿಸಲಿಲ್ಲ. ನಾವು ಅವರ ಭೂಮಿಯನ್ನು ಕಬಳಿಸಲಿಲ್ಲ, ಅವರ ಸಂಸ್ಕೃತಿಯನ್ನು ನಿರ್ನಾಮಗೊಳಿಸಲಿಲ್ಲ, ಅವರ ಮೇಲೆ ನಮ್ಮ ಜೀವನ ವಿಧಾನವನ್ನು ಹೇರಲು ಪ್ರಯತ್ನಿಸಲಿಲ್ಲ. ನಾವು ಏಕೆ ಹಾಗೆ ಮಾಡಲಿಲ್ಲ? ಏಕೆಂದರೆ ಇತರರ ಸ್ವಾತಂತ್ರ್ಯವನ್ನು ಗೌರವಿಸುತ್ತೇವೆ. ಆದ್ದರಿಂದಲೇ ನಾನು ಕಾಣುವ ಪ್ರಪ್ರಥಮ ಚಿತ್ರವೇ ಸ್ವಾತಂತ್ರ್ಯ. ೧೮೫೭ರಲ್ಲಿ ಸ್ವಾತಂತ್ರ್ಯ ಹೋರಾಟವನ್ನು ಪ್ರಾರಂಭಿಸಿದಾಗಲೇ ಈ ಸ್ವಾತಂತ್ರ್ಯದ ಚಿತ್ರ ಭಾರತದ ಕಣ್ಮುಂದೆ ಇತ್ತು ಎಂದು ನಾನು ನಂಬುತ್ತೇನೆ. ಈ ಸ್ವಾತಂತ್ರ್ಯವನ್ನು ನಾವು ರಕ್ಷಿಸಬೇಕು, ಪೋಷಿಸಬೇಕು ಮತ್ತು ಬಲಪಡಿಸಬೇಕು. ನಾವು ಸ್ವತಂತ್ರರಾಗಿರದಿದ್ದರೆ ಯಾರೂ ನಮ್ಮನ್ನು ಗೌರವಿಸುವುದಿಲ್ಲ.

ನಾವು ಸ್ವತಂತ್ರರಾಗಿರದಿದ್ದರೆ ಯಾರೂ ನಮ್ಮನ್ನು ಗೌರವಿಸುವುದಿಲ್ಲ.

ಭಾರತದ ಬಗೆಗಿನ ನನ್ನ ಎರಡನೆಯ ಚಿತ್ರವೇ ಅಭಿವೃದ್ಧಿ. ಕಳೆದ ಐವತ್ತು ವರ್ಷಗಳಿಂದಲೂ ನಾವು ಅಭಿವೃದ್ಧಿಶೀಲ ರಾಷ್ಟ್ರವಾಗಿಯೇ ಉಳಿದಿದ್ದೇವೆ. ಈಗ ನಮ್ಮ ದೇಶವನ್ನು ಅಭಿವೃದ್ಧ ರಾಷ್ಟ್ರವನ್ನಾಗಿ ಮಾಡುವ ಸಮಯ ಬಂದಿದೆ. GDP ದೃಷ್ಟಿಯಿಂದ ನಾವು ಜಗತ್ತಿನ ೫ ಉನ್ನತ ರಾಷ್ಟ್ರಗಳಲ್ಲಿ ಒಂದಾಗಿದ್ದೇವೆ. ಅನೇಕ ಕ್ಷೇತ್ರಗಳಲ್ಲಿ ನಾವು ಶೇಕಡ ೧೦ ಬೆಳವಣಿಗೆಯ ಪ್ರಮಾಣವನ್ನು ಸಾಧಿಸಿದ್ದೇವೆ. ನಮ್ಮ ಬಡತನದ ರೇಖೆ ಕೆಳಗಿಳಿಯುತ್ತಿದೆ. ವಿಶ್ವಾದ್ಯಂತ ನಮ್ಮ ಸಾಧನೆಯನ್ನು ಗುರುತಿಸಲಾಗುತ್ತಿದೆ. ಆದರೂ ನಮ್ಮಲ್ಲಿ ಆತ್ಮವಿಶ್ವಾಸವಿಲ್ಲ, ಒಂದು ಅಭಿವೃದ್ಧ ರಾಷ್ಟ್ರವಾಗಿ ಬೆಳೆಯುವ ಭರವಸೆ ನಮ್ಮಲ್ಲಿಲ್ಲದಿರುವುದು ತುಂಬ ವಿಷಾದಕರ.

ನನ್ನ ಮೂರನೆಯ ಚಿತ್ರ ಇದು. ಭಾರತ ಜಗತ್ತಿನಲ್ಲಿ ಶಕ್ತಿಶಾಲಿ ರಾಷ್ಟ್ರವಾಗಿ ಎದ್ದುನಿಲ್ಲಬೇಕು. ಇಲ್ಲದಿದ್ದರೆ ಯಾರೂ ನಮ್ಮನ್ನು ಗೌರವಿಸುವುದಿಲ್ಲ. ಶಕ್ತಿಯೇ ಶಕ್ತಿಯನ್ನು ಗೌರವಿಸುವುದು. ಒಂದು ಸೈನಿಕಶಕ್ತಿಯಾಗಿ ಮಾತ್ರವಲ್ಲ, ಆರ್ಥಿಕಶಕ್ತಿಯಾಗಿಯೂ ನಾವು ಜಗತ್ತಿನ ಮುಂದೆ ಎದ್ದು ನಿಲ್ಲಬೇಕು. ಮೂವರು ಶ್ರೇಷ್ಠ ವ್ಯಕ್ತಿಗಳೊಡನೆ ಕೆಲಸ ಮಾಡುವ ಸೌಭಾಗ್ಯ ನನ್ನದಾಗಿತ್ತು. ಅವರಾರೆಂದರೆ, ಬಾಹ್ಯಾಕಾಶ ವಿಭಾಗದ ಡಾ. ವಿಕ್ರಮ್ ಸಾರಾಭಾಯ್, ಇವರ ಉತ್ತರಾಧಿಕಾರಿಗಳಾದ ಸತೀಶ್ ಧಾವನ್ ಮತ್ತು ಭೈಜಿಕ ವಿಜ್ಞಾನಿ ಡಾ.ಬ್ರಹ್ಮಪ್ರಕಾಶ್. ನಾನು ಈ ಮೂವರೊಡನೆಯೂ ಅತಿ ನಿಕಟ ಸಂಪರ್ಕ ಹೊಂದಿದ್ದೆ ಮತ್ತು ಇದು ನನ್ನ ದೊಡ್ಡ ಸೌಭಾಗ್ಯವೆಂದು ನಾನು ಪರಿಗಣಿಸುತ್ತೇನೆ.

ನನ್ನ ಜೀವನದಲ್ಲಿ ನಾಲ್ಕು ಮಹತ್ವಪೂರ್ಣ ಘಟ್ಟಗಳನ್ನು ನಾನು ಗುರುತಿಸುತ್ತೇನೆ: ಮೊದಲನೆಯದು, ಇಸ್ರೋ(ISRO)ದಲ್ಲಿ ನಾನು ಕಳೆದ ಇಪ್ಪತ್ತು ವರ್ಷ. ಅಲ್ಲಿ ಭಾರತದ ಪ್ರಪ್ರಥಮ ಉಪಗ್ರಹ ಉಡಾವಣೆ ವಾಹನವಾದ SLV3ಯ ಯೋಜನಾ ನಿರ್ದೇಶಕನಾಗಿ ಕೆಲಸ ಮಾಡುವ ಅವಕಾಶ ನನಗೆ ದೊರಕಿತ್ತು. ಅದೇ ರೋಹಿಣಿ ಉಪಗ್ರಹವನ್ನು ಉಡಾಯಿಸಿದುದು. ಈ ವರ್ಷಗಳು ನನ್ನ ಜೀವನದ ಮೇಲೆ ಮಹತ್ವಪೂರ್ಣ ಪರಿಣಾಮವನ್ನು ಉಂಟುಮಾಡಿವೆ. ಎರಡನೆಯ ಘಟ್ಟ ಅನಂತರ DRDO ಸೇರಿದುದು. ಈ ಅವಧಿಯಲ್ಲಿ ನಾನು ಭಾರತದ ಕ್ಷಿಪಣಿ ಕಾರ್ಯಕ್ರಮದಲ್ಲಿ ಭಾಗವಹಿಸುವ ಅವಕಾಶ ದೊರಕಿತು. ೧೯೮೯ರಲ್ಲಿ ಅಗ್ನಿ ಕ್ಷಿಪಣಿಯನ್ನು ಸ್ಫೋಟಿಸಿದಾಗ ಅದು ನನ್ನ ಎರಡನೆಯ ಆನಂದವಾಯಿತು. ಮೂರನೆಯ ಘಟ್ಟ ಭಾರತದ ಅಣ್ವಸ್ತ್ರ ಪ್ರಯೋಗದಲ್ಲಿ ಭಾಗವಹಿಸಿದುದು. ಇತ್ತೀಚೆಗೆ ಮೇ ೧೧ ಮತ್ತು ೧೩ರಂದು ಅಣ್ವಸ್ತ್ರ ಪರೀಕ್ಷೆ (nuclear tests) ನಡೆದಾಗ ಅದು ನನ್ನ ಮೂರನೆಯ ಆನಂದ. ನಾವು ಕೇವಲ ಅಭಿವೃದ್ಧಿಶೀಲ ರಾಷ್ಟ್ರವಲ್ಲ, ಅಭಿವೃದ್ಧ ರಾಷ್ಟ್ರಗಳಲ್ಲಿ ಒಂದು ಎಂದು ಜಗತ್ತಿಗೆ ತೋರಿಸಿಕೊಟ್ಟಾಗ ನನಗಾದ ಆನಂದ ಹೇಳತೀರದು. ನಾವು ಅಗ್ನಿಕ್ಷಿಪಣಿಗಾಗಿ ಕಾರ್ಬನ್-ಕಾರ್ಬನ್ ಎಂಬ ಅತ್ಯಂತ ಹಗುರವಾದ ವಸ್ತುವೊಂದನ್ನು ತಯಾರಿಸಿದ್ದೇವೆ. ಇದೊಂದು ಮಹತ್ಸಾಧನೆ.

ನಾಲ್ಕನೆಯ ಘಟ್ಟ: ಒಂದು ದಿನ ನನ್ನ ಪ್ರಯೋಗಶಾಲೆಗೆ ನಿಜಾಂ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್‌ನ ಮೂಳೆಶಸ್ತ್ರ ಚಿಕಿತ್ಸಕರೊಬ್ಬರು ಭೇಟಿ ನೀಡಿದರು. ಅವರು ಮೇಲೆ ಹೆಸರಿಸಿದ

**ನಮ್ಮದು ಅತ್ಯಂತ ಶ್ರೇಷ್ಠದೇಶ. ನಮ್ಮ ಯಶೋಗಾಥೆಗಳು ಅನೇಕ. ಆದರೆ ನಾವದನ್ನು ಗುರುತಿಸುವುದಕ್ಕೆ ಹಿಂಜರಿಯುತ್ತೇವೆ. ಯಾಕೆ ?**

ಹಗುರ ವಸ್ತುವನ್ನು ಮೇಲೆತ್ತಿದರು. ಅಷ್ಟು ಹಗುರವಾಗಿರುವುದನ್ನು ನೋಡಿ ಅವರಿಗೆ ಆಶ್ಚರ್ಯವಾಯಿತು. ಅವರು ನನ್ನನ್ನು ತಮ್ಮ ಆಸ್ಪತ್ರೆಗೆ ಕರೆದುಕೊಂಡು ಹೋಗಿ ತಮ್ಮ ರೋಗಿಗಳನ್ನು ತೋರಿಸಿದರು. ಅಲ್ಲಿ ಚಿಕ್ಕ ಹುಡುಗರು ಮತ್ತು ಹುಡುಗಿಯರು ಮೂರು ಕೆ.ಜಿ.ಗೂ ಅಧಿಕ ತೂಕದ ಲೋಹದ ಕ್ಯಾಲಿಪರ್ಸ್ (Callipers) ಹಾಕಿಕೊಂಡು ಓಡಾಡುತ್ತಿದ್ದರು—ಅತಿ ಭಾರದಿಂದಾಗಿ ಕಾಲೆಳೆದುಕೊಂಡು ಹೋಗುತ್ತಿದ್ದರು. ವೈದ್ಯರು ನನಗೆ ಹೇಳಿದರು: "ಈ ನನ್ನ ರೋಗಿಗಳ ನೋವನ್ನು ದಯವಿಟ್ಟು ಕಡಮೆ ಮಾಡುತ್ತೀರಾ?" ಮೂರೇ ವಾರಗಳಲ್ಲಿ ನಾವು ಕೇವಲ ೩೦೦ ಗ್ರಾಂ ತೂಕದ ಕ್ಯಾಲಿಪರ್ಸ್‌ಗಳನ್ನು ತಯಾರಿಸಿ ತೆಗೆದುಕೊಂಡುಹೋಗಿ ಕೊಟ್ಟೆವು. ಮಕ್ಕಳು ತಮ್ಮ ಕಣ್ಣನ್ನೇ ತಾವು ನಂಬದಾದರು. ಮೂರು ಕೆ.ಜಿ. ಭಾರ ಎಳೆದುಕೊಂಡುಹೋಗುವ ಬದಲು ಈಗ ಅವರು ಮುಕ್ತವಾಗಿ ಓಡಾಡಬಹುದು. ಅವರ ತಂದೆತಾಯಿಯರ ಕಣ್ಣಿನಿಂದ ನೀರು ಸುರಿಯಿತು. ಇದು ನನ್ನ ನಾಲ್ಕನೆಯ ಆನಂದ.

ಇಲ್ಲಿ ಸಮೂಹ ಮಾಧ್ಯಮ ಇಷ್ಟೊಂದು ನಕಾರಾತ್ಮಕವಾಗಿರುವುದೇಕೆ? ಭಾರತದಲ್ಲಿ ನಮ್ಮ ಶಕ್ತಿಯನ್ನೇ, ನಮ್ಮ ಸಾಧನೆಯನ್ನೇ ನಾವು ಏಕೆ ಗುರುತಿಸಲಾರದವರಾಗಿದ್ದೇವೆ? ನಮ್ಮದು ಅತ್ಯಂತ ಶ್ರೇಷ್ಠದೇಶ. ನಮ್ಮ ಯಶೋಗಾಥೆಗಳು ಅನೇಕ. ಆದರೆ ನಾವದನ್ನು ಗುರುತಿಸುವುದಕ್ಕೆ ಹಿಂಜರಿಯುತ್ತೇವೆ. ಯಾಕೆ? ಕ್ಷೀರೋತ್ಪಾದನೆಯಲ್ಲಿ ನಮಗೆ ಪ್ರಥಮ ಸ್ಥಾನ. ದೂರಸಂವೇದನಾ ಉಪಗ್ರಹಗಳ ವಿಷಯದಲ್ಲಿ ನಾವೇ ಎಲ್ಲರಿಗಿಂತ ಮುಂದಿದ್ದೇವೆ. ಗೋದಿಯ ಉತ್ಪಾದನೆಯಲ್ಲಿ ನಮಗೆ ಪ್ರಪಂಚದಲ್ಲಿ ಎರಡನೆಯ ಸ್ಥಾನ. ಅಕ್ಕಿಯ ಬೆಳೆಯಲ್ಲಿಯೂ ನಾವು ಎರಡನೆಯ ಸ್ಥಾನದಲ್ಲಿದ್ದೇವೆ. ಡಾ. ಸುದರ್ಶನರನ್ನು ನೋಡಿ, ಅವರು ಒಂದು ಆದಿವಾಸಿ ಹಳ್ಳಿಯನ್ನು ಆದರ್ಶ ಗ್ರಾಮವನ್ನಾಗಿ ಪರಿವರ್ತಿಸಿದರು. ಇಂತಹ ಮಿಲಿಯಗಟ್ಟಲೆ ಸಾಧನೆಗಳಿವೆ. ಆದರೆ ನಮ್ಮ ಪತ್ರಿಕೆಗಳು ಕೆಟ್ಟಸುದ್ದಿ, ವಿಫಲತೆಗಳು, ಅನಾಹುತಗಳು, ಹತ್ಯಾಕಾಂಡ ಇತ್ಯಾದಿಗಳನ್ನು ಮಾತ್ರ ಪ್ರತಿಬಿಂಬಿಸುತ್ತವೆ.

ನಾನು ಒಮ್ಮೆ ಇಸ್ರೇಲ್ ರಾಜಧಾನಿ ಟೆಲ್ ಅವಿವ್‌ಗೆ ಹೋಗಿದ್ದೆ. ಅಲ್ಲಿ ನಾನು ಇಸ್ರೇಲಿ ವೃತ್ತಪತ್ರಿಕೆಯನ್ನು ಓದುತ್ತಿದ್ದೆ. ಅದೇ ಸಂದರ್ಭದಲ್ಲಿ ಅಲ್ಲಿ ಸಂಘರ್ಷ, ಬಾಂಬ್ ಸ್ಫೋಟ, ಸಾವು, ನೋವು ಬಹಳಷ್ಟು ನಡೆಯುತ್ತಿದ್ದವು. ಆದರೆ ವೃತ್ತಪತ್ರಿಕೆಯ ಮುಖಪುಟದಲ್ಲಿ ಒಬ್ಬ ಯಹೂದಿ ವ್ಯಕ್ತಿಯ ಚಿತ್ರವಿತ್ತು; ಆತ ಐದು ವರ್ಷಗಳಲ್ಲಿ ತನ್ನ ಮರುಭೂಮಿಯನ್ನು ಸಸ್ಯಶ್ಯಾಮಲವಾಗಿ ಪರಿವರ್ತಿಸಿದ್ದನು. ಈ ಮಹತ್ಸಾಧನೆಯ ಸುದ್ದಿ ಎಲ್ಲರ ಗಮನವನ್ನೂ ಸೆಳೆಯಿತು. ಬಾಂಬ್ ಸ್ಫೋಟ, ಹತ್ಯಾಕಾಂಡ ಇತ್ಯಾದಿಗಳೆಲ್ಲವೂ ಒಳಗಿನ ಪುಟಗಳಲ್ಲಿ ಬೇರೆ ಸುದ್ದಿಗಳೊಡನೆ ಸೇರಿಕೊಂಡು ಮರೆಯಾಗಿಬಿಟ್ಟಿದ್ದವು. ಆದರೆ ನಾವು ಇಲ್ಲಿ ಪ್ರತಿದಿನವೂ ಸಾವು, ಭಯೋತ್ಪಾದನೆ, ಅಪರಾಧ, ಭ್ರಷ್ಟಾಚಾರ, ಅತ್ಯಾಚಾರ ಇತ್ಯಾದಿಗಳನ್ನೇ ಓದುತ್ತೇವೆ. ಏಕೆ ಈ ನಿಷೇಧಾತ್ಮಕ ಪ್ರವೃತ್ತಿ?

ಇನ್ನೊಂದು ಪ್ರಶ್ನೆ. ವಿದೇಶ ವಸ್ತುಗಳ ಬಗ್ಗೆ ನಮಗೆ ಏಕಿಂತು ವ್ಯಾಮೋಹ? ನಮಗೆ ವಿದೇಶೀ ಟಿ.ವಿ.ಗಳೇ ಬೇಕು, ನಮಗೆ ವಿದೇಶೀ ಶರ್ಟುಗಳೇ ಬೇಕು, ನಮಗೆ ವಿದೇಶೀ ತಂತ್ರಜ್ಞಾನವೇ ಬೇಕು. ಈ ಆಮದು ವಸ್ತುಗಳ ಗೀಳು ಏಕೆ? ಆತ್ಮಾವಲಂಬನೆಯಿಂದಲೇ ಆತ್ಮಗೌರವ ಉಂಟಾಗುತ್ತದೆ ಎಂಬುದು ನಮಗೆ ಏಕೆ ತಿಳಿಯುತ್ತಿಲ್ಲ? ನಾನು ಹಿಂದೆ ಹೈದರಾಬಾದಿನಲ್ಲಿ ಒಮ್ಮೆ ಭಾಷಣ ಮಾಡುತ್ತಿದ್ದೆ. ಓರ್ವ ಬಾಲಕಿ ನನ್ನ ಹಸ್ತಾಕ್ಷರವನ್ನು ಕೇಳಿದಳು, "ನಿನ್ನ ಜೀವನದ ಗುರಿ ಏನು?" ಎಂದು ನಾನು ಆಕೆಯನ್ನು ವಿಚಾರಿಸಿದೆ. ಆಕೆ ಉತ್ತರಿಸಿದಳು: "ನಾನು ಅಭಿವೃದ್ಧ ಭಾರತದಲ್ಲಿ ಬಾಳಲು ಬಯಸುತ್ತೇನೆ." ಆಕೆಗಾಗಿ ನೀವು, ನಾನು ಎಲ್ಲರೂ ಅಭಿವೃದ್ಧ ಭಾರತವನ್ನು ನಿರ್ಮಿಸಬೇಕಾಗಿದೆ. ಇದೇ ನಿಮ್ಮ ದೃಢ ಸಂಕಲ್ಪವಾಗಲಿ.

ನೀವು ಹೇಳುತ್ತೀರಿ, ನಮ್ಮ ಸರ್ಕಾರ ತುಂಬ ಅದಕ್ಷ ಎಂದು.

ನೀವು ಹೇಳುತ್ತೀರಿ, ನಮ್ಮ ಕಾನೂನುಗಳು ತುಂಬ ಹಳೆಯವು ಎಂದು.

ನೀವು ಹೇಳುತ್ತೀರಿ, ನಮ್ಮ ನಗರಸಭೆ ಕೊಳಚೆಯನ್ನು ಎತ್ತುವುದಿಲ್ಲ ಎಂದು.

ನೀವು ಹೇಳುತ್ತೀರಿ, ನಮ್ಮ ಫೋನುಗಳು ಕೆಲಸ ಮಾಡುವುದಿಲ್ಲ, ರೈಲು ಸರಿಯಾಗಿ ಓಡುವುದಿಲ್ಲ, ವಿಮಾನಗಳು ಅಧ್ವಾನ, ಅಂಚೆ ವಿಚಾರ ಕೇಳಲೇಬೇಡಿ ಇತ್ಯಾದಿ...

ನೀವು ಹೇಳುತ್ತೀರಿ, ನಮ್ಮ ದೇಶದ ಅವಸ್ಥೆ ಈಗ ನಾಯಿಪಾಡಾಗಿದೆ ಎಂದು.

ಬರೀ ಹೇಳುವುದೇ ಆಯಿತೇ ಹೊರತು ನೀವೇನು ಮಾಡುತ್ತಿರುವಿರಿ?

ನೀವು ಈಗ ಸಿಂಗಪುರಕ್ಕೆ ಹೋಗುತ್ತೀರಿ ಎಂದಿಟ್ಟುಕೊಳ್ಳಿ. ನೀವು ಅಲ್ಲಿಯ ವಿಮಾನನಿಲ್ದಾಣದಿಂದ ಹೊರಬರುತ್ತೀರಿ. ಈಗ ನೀವು ಅಂತಾರಾಷ್ಟ್ರೀಯ ಪ್ರಜೆಯಾಗಿ ಅತ್ಯುತ್ತಮ ಸ್ಥಿತಿಯಲ್ಲಿರುತ್ತೀರಿ. ನೀವು ಸಿಂಗಪುರದಲ್ಲಿ ಸಿಗರೇಟು ತುಂಡುಗಳನ್ನು ರಸ್ತೆಯಲ್ಲಿ ಎಸೆಯುವುದಿಲ್ಲ, ಅಂಗಡಿಗಳಲ್ಲಿ ತಿನ್ನುವುದಿಲ್ಲ. ಅಲ್ಲಿಯ ಅಂತರ್ನೆಲ ಸಂಪರ್ಕದ ವಿಷಯದಲ್ಲಿ ನೀವು ಅಲ್ಲಿಯವರಷ್ಟೇ ಹೆಮ್ಮೆ ಪಡುತ್ತೀರಿ. ಅಲ್ಲಿಯ ಆರ್ಚಾರ್ಡ್ ರಸ್ತೆಯಲ್ಲಿ ಸಂಜೆ ೫ರಿಂದ ೮ ಗಂಟೆಯ ಅವಧಿಯಲ್ಲಿ ವಾಹನಸಂಚಾರ ಮಾಡಲು ನೀವು ೬೦ ರೂ. ಕೊಡುತ್ತೀರಿ. ನೀವು ಹೋಟೆಲಿನಲ್ಲೋ ವಾಣಿಜ್ಯ ಸಂಕೀರ್ಣದಲ್ಲೋ ಹೆಚ್ಚು ಹೊತ್ತು ಕಳೆದು ತಡವಾಗಿ ಬಂದರೆ ಅದಕ್ಕಾಗಿ ಪಾರ್ಕಿಂಗ್ ಸ್ಥಳದಲ್ಲಿ ನೀವು ಫೈನ್ ಕೊಡು

" ಭಾರತಕ್ಕಾಗಿ ನಾವು ಏನು ಮಾಡಬಹುದು ಎಂಬುದನ್ನು ಚಿಂತಿಸಿ. ಅಮೆರಿಕ ಮತ್ತು ಇತರ ಪಾಶ್ಚಾತ್ಯ ರಾಷ್ಟ್ರಗಳಂತೆ ಭಾರತವನ್ನು ಮಾರ್ಪಡಿಸಲು ನಾವೇನು ಮಾಡಬೇಕು ಎಂದು ನಿಮ್ಮನ್ನು ನೀವೇ ಕೇಳಿಕೊಳ್ಳಿ."

ತ್ತೀರಿ—ನೀವೆಷ್ಟೇ ಘನತೆವೆತ್ತ ವ್ಯಕ್ತಿಯಾಗಿರಬಹುದು. "ನಾನು ಯಾರು, ನಿಮಗೆ ಗೊತ್ತೊ?"ಎಂದು ನೀವು ಧಿಮಾಕು ಹಾಕುವುದಿಲ್ಲ. ನೀವು ದುಬಾಯ್‌ನಲ್ಲಿ ರಮಜಾನ್ ಸಮಯದಲ್ಲಿ ಸಾರ್ವಜನಿಕ ಸ್ಥಳದಲ್ಲಿ ಏನನ್ನೂ ತಿನ್ನುವ ಸಾಹಸ ಮಾಡುವುದಿಲ್ಲ. ನೀವು ಜೆಡ್ಡಾಹ್‌ದಲ್ಲಿ ತಲೆಯನ್ನು ಮುಚ್ಚಿಕೊಳ್ಳದೆ ಹೊರಗೆ ಹೋಗುವ ಸಾಹಸ ಖಂಡಿತ ಮಾಡುವುದಿಲ್ಲ. ಲಂಡನ್ನಿನಲ್ಲಿ ನಿಮ್ಮ ದೂರವಾಣಿ ಬಿಲ್ಲನ್ನು ಬೇರೆಯವರ ಹೆಸರಿಗೆ ಬರೆಸಲು ದೂರವಾಣಿ ನೌಕರನಿಗೆ ಲಂಚ ಕೊಡುವ ಧೈರ್ಯ ನಿಮಗಿರುವುದಿಲ್ಲ. ನೀವು ವಾಷಿಂಗ್‌ಟನ್ನಿನಲ್ಲಿ ೮೮ ಕಿಲೋಮೀಟರಿಗಿಂತ ವೇಗವಾಗಿ ವಾಹನ ನಡೆಸಿದರೆ ನೀವು ಟ್ರಾಫಿಕ್ ಪೋಲಿಸ್‌ನವನಿಗೆ ತಪ್ಪಗೆ ಫೈನ್ ಕೊಟ್ಟು ಬರುತ್ತೀರಿ. ಟೋಕಿಯೋದ ಬೀದಿಯಲ್ಲಿ ನೀವು ತಂಬಳ ತುಪ್ಪುವುದಿಲ್ಲ ಏಕೆ?

ನೀವು ಬೇರೆ ದೇಶಗಳಿಗೆ ಹೋದಾಗ ಅಲ್ಲಿಯ ವ್ಯವಸ್ಥೆಗೆ ಗೌರವಿಸಿ ಅದರಂತೆ ನಡೆಯುತ್ತೀರಿ. ಆದರೆ ಈ ದೇಶದಲ್ಲಿ ಮಾತ್ರ ಹಾಗೆ ಮಾಡುವುದಿಲ್ಲ. ನೀವು ಭಾರತದ ನೆಲಕ್ಕೆ ಕಾಲಿಟ್ಟ ಕೂಡಲೆ ಪೇಪರ್ ಮತ್ತು ಸಿಗರೇಟು ತುಂಡುಗಳನ್ನು ಎಲ್ಲೆಂದರಲ್ಲಿ ಎಸೆಯುತ್ತೀರಿ. ಬೇರೆ ದೇಶಗಳಲ್ಲಿ ಅಲ್ಲಿಯ ವ್ಯವಸ್ಥೆಗೆ ಅನುಗುಣವಾಗಿ ಸಂಭಾವಿತರಂತೆ ವರ್ತಿಸುವ ನೀವು ಈ ದೇಶದಲ್ಲಿ ಏಕೆ ಹಾಗೆ ಮಾಡುವುದಿಲ್ಲ?

ಮುಂಬೈ ನಗರಸಭೆಯ ಮಾಜಿ ಆಯುಕ್ತರಾದ ಶ್ರೀ ತಿನೈಕರ್ ಅವರು ಸಂದರ್ಶನವೊಂದರಲ್ಲಿ ಒಂದು ವಿಷಯವನ್ನು ಹೇಳಿದರು: "ಶ್ರೀಮಂತರು ತಮ್ಮ ನಾಯಿಗಳನ್ನು ಬೀದಿಯಲ್ಲಿ ನಡೆಸಿಕೊಂಡು ಹೋಗುತ್ತ, ಅವು ಹೇಸಿಗೆ ಮಾಡಲು ಬಿಡುತ್ತಾರೆ. ಅದೇ ವ್ಯಕ್ತಿಗಳು ಮತ್ತೆ ನಗರಸಭೆಯ ಅದಕ್ಷತೆಯ ಬಗ್ಗೆ, ರಸ್ತೆ ಫುಟ್‌ಪಾತ್‌ಗಳು ಗಲೀಜಾಗಿರುವುದರ ಬಗ್ಗೆ ಅಧಿಕಾರಿಗಳನ್ನು ದೂರುತ್ತಾರೆ. ಅಧಿಕಾರಿಗಳು ಏನು ಮಾಡಲಾದೀತು? ಅವರು ಪೊರಕೆ ಹಿಡಿದು ಇವರ ನಾಯಿಗಳ ಹಿಂದೆ ಹೋಗಬೇಕೆ?" ಅಮೆರಿಕದಲ್ಲಿ ನಾಯಿಯ ಯಜಮಾನರೇ ಅದು ಹೇಸಿಗೆ ಮಾಡಿದರೆ ಸ್ವಚ್ಛ ಮಾಡಬೇಕು. ಜಪಾನಿನಲ್ಲಿಯೂ ಹಾಗೆಯೇ. ಭಾರತದ ನಾಗರಿಕರು ಹಾಗೆ ಮಾಡುತ್ತಾರೆಯೇ?

ನಾವು ಒಂದು ಸರ್ಕಾರವನ್ನು ಚುನಾಯಿಸುತ್ತೇವೆ, ಅನಂತರ ಎಲ್ಲ ಜವಾಬ್ದಾರಿಯನ್ನು ಅದಕ್ಕೆ ವಹಿಸಿಬಿಡುತ್ತೇವೆ. ನಾವು ಸುಮ್ಮನೆ ಕುಳಿತುಕೊಂಡು ಎಲ್ಲವನ್ನೂ ಸರ್ಕಾರವೇ ಮಾಡಬೇಕೆಂದು ನಿರೀಕ್ಷಿಸುತ್ತೇವೆ. ನಮ್ಮ ಕೊಡುಗೆ ಯಾವಾಗಲೂ ನಕಾರಾತ್ಮವೇ. ಸರ್ಕಾರ ಶುದ್ಧಗೊಳಿಸಬೇಕೆಂದು ನಾವು ನಿರೀಕ್ಷಿಸುತ್ತೇವೆ, ಆದರೆ ನಾವು ಎಲ್ಲೆಲ್ಲಿಯೂ ಕೊಳಕು ಮಾಡುವುದನ್ನು ನಿಲ್ಲಿಸುವುದಿಲ್ಲ, ಅಲ್ಲಲ್ಲಿ ಬಿದ್ದಿರುವ ಕಾಗದದ ತುಂಡುಗಳನ್ನು ತೆಗೆದು ಕಸದ ಡಬ್ಬಿಗೆ ಹಾಕುವ ಕಾರ್ಯವನ್ನಂತೂ ನಾವು ಮಾಡುವುದೇ ಇಲ್ಲ. ವಿಮಾನಗಳಲ್ಲಿ ಮತ್ತು ರೈಲುಗಳಲ್ಲಿ ಉತ್ತಮ ಶೌಚಾಲಯಗಳಿರಬೇಕೆಂದು ನಾವು ನಿರೀಕ್ಷಿಸುತ್ತೇವೆ, ಆದರೆ ಆ ಶೌಚಾಲಯಗಳನ್ನು ಶುದ್ಧವಾಗಿ ಇಟ್ಟುಕೊಳ್ಳುವ ಗೋಜಿಗೆ ನಾವು ಹೋಗುವುದೇ ಇಲ್ಲ.

ಮಹಿಳೆಯರ ಮೇಲೆ ದೌರ್ಜನ್ಯ, ವರದಕ್ಷಿಣೆ, ಸ್ತ್ರೀಭ್ರೂಣ ಹತ್ಯೆ ಮುಂತಾದ ಅಮಾನುಷ ವಿಷಯಗಳ ವಿರುದ್ಧವಾಗಿ ನಾವು ಸಭೆಗಳಲ್ಲಿ ದೊಡ್ಡ ಕೂಗು ಎಬ್ಬಿಸುತ್ತೇವೆ. ಆದರೆ ನಮ್ಮ ನಮ್ಮ ಮನೆಗಳಲ್ಲಿ ನಾವು ಮಾಡುವುದು ಅದನ್ನೇ. ಅದಕ್ಕೆ ನಾವು ಕೊಡುವ ಕಾರಣ: "ಇಡೀ ವ್ಯವಸ್ಥೆಯೇ ಹಾಗಿದೆ, ನಾವೇನು ಮಾಡಲಾದೀತು? ನಾವೊಬ್ಬರೇ ವರದಕ್ಷಿಣೆ ತೆಗೆದುಕೊಳ್ಳದೇ ಇರುವುದರಿಂದ ಏನು ಪ್ರಯೋಜನ?" ಈಗ ವ್ಯವಸ್ಥೆಯನ್ನು ಬದಲಾಯಿಸುವವರಾರು? ವ್ಯವಸ್ಥೆ ಯಾರಿಂದ ಆಗಿರುವುದು? ಈ ವ್ಯವಸ್ಥೆಗೆ ನೆರೆಯವರು ಕಾರಣ, ಬೇರೆ ನಗರದವರು ಕಾರಣ, ಸರ್ಕಾರ ಕಾರಣ, ನಾವಂತೂ ಖಂಡಿತ ಅಲ್ಲ, ಎಂದು ಸುಲಭವಾಗಿ ತಪ್ಪನ್ನು ಬೇರೆಯವರ ಮೇಲೆ ಹೊರಿಸಿಬಿಡುತ್ತೇವೆ. ಈ ವ್ಯವಸ್ಥೆಯನ್ನು ಬದಲಾಯಿಸಲು ನಾವೇ ಏನಾದರೂ ಮಾಡಬೇಕಾದಾಗ ನಾವು ನಮ್ಮ ಸಂಸಾರದೊಂದಿಗೆ ಗೂಡಿನೊಳಗೆ ಸೇರಿಕೊಂಡುಬಿಡುತ್ತೇವೆ ಮತ್ತು ಯಾರಾದರೂ ದೂರದೇಶದಿಂದ ಬಂದು ಪವಾಡಸದೃಶವಾಗಿ ಎಲ್ಲವನ್ನೂ ಶುದ್ಧೀಕರಿಸಬೇಕೆಂದು ನಿರೀಕ್ಷಿಸುತ್ತೇವೆ. ಅಥವಾ ದೇಶವನ್ನೇ ಬಿಟ್ಟುಹೋಗುತ್ತೇವೆ, ಅಂಜುಕುಳಿಗಳಂತೆ ಅಮೆರಿಕಕ್ಕೆ ಓಡಿಹೋಗಿ ಅವರ ವೈಭವದಲ್ಲಿ ನಾವು ಮೆರೆಯುತ್ತೇವೆ, ಅವರ ವ್ಯವಸ್ಥೆಯನ್ನು ಪ್ರಶಂಸಿಸುತ್ತೇವೆ. ನ್ಯೂಯಾರ್ಕ್‌ನಲ್ಲಿ ಸುರಕ್ಷತೆ ಇಲ್ಲದಿದ್ದರೆ ನಾವು ಇಂಗ್ಲೆಂಡಿಗೆ ಓಡುತ್ತೇವೆ. ಇಂಗ್ಲೆಂಡಿನಲ್ಲಿ ನಿರುದ್ಯೋಗ ಸಮಸ್ಯೆ ತಲೆದೋರಿದರೆ ಕೂಡಲೆ ನಾವು ಕೊಲ್ಲಿದೇಶಕ್ಕೆ ಹಾರುತ್ತೇವೆ. ಕೊಲ್ಲಿಯಲ್ಲಿ ಯುದ್ಧಭೀತಿ ಉಂಟಾದಕೂಡಲೇ ಭಾರತ ಸರ್ಕಾರವು ನಮ್ಮನ್ನು ಸುರಕ್ಷಿತವಾಗಿ ಭಾರತಕ್ಕೆ ಮರಳಿ ಕರೆದುಕೊಂಡು ಬರಬೇಕೆಂದು ಒತ್ತಾಯಿಸುತ್ತೇವೆ.

ಪ್ರತಿಯೊಬ್ಬರೂ ದೇಶವನ್ನು ತೆಗಳುವವರೇ, ದೋಚುವವರೇ. ಯಾರೂ ದೇಶಕ್ಕೆ ನೀಡುವ ಯೋಚನೆ ಮಾಡುವುದಿಲ್ಲ. ನಮ್ಮ ಅಂತಃಸಾಕ್ಷಿಯನ್ನು ಹಣಕ್ಕಾಗಿ ಒತ್ತೆಯಿಟ್ಟಿದ್ದೇವೆ. ಜೆ.ಎಫ್. ಕೆನಡಿಯವರ ಮಾತನ್ನು ಭಾರತಕ್ಕೆ ಅನ್ವಯಿಸಿ ಹೀಗೆ ಹೇಳಬಹುದು : "ಭಾರತಕ್ಕಾಗಿ ನಾವು ಏನು ಮಾಡಬಹುದು ಎಂಬುದನ್ನು ಚಿಂತಿಸಿ. ಅಮೆರಿಕ ಮತ್ತು ಇತರ ಪಾಶ್ಚಾತ್ಯ ರಾಷ್ಟ್ರಗಳಂತೆ ಭಾರತವನ್ನು ಮಾರ್ಪಡಿಸಲು ನಾವೇನು ಮಾಡಬೇಕು ಎಂದು ನಿಮ್ಮನ್ನು ನೀವೇ ಕೇಳಿಕೊಳ್ಳಿ."